ಜನವರಿ ೨೦೧೫

# ಕಾನನ

## ನಿಸರ್ಗದೆಡೆಗೆ ಪಯಣ



ವನ್ಯವಿಜ್ಞಾನ ಚಿತ್ರ ಸಂಚಿಕೆ

BANNERUGHATTA
WILDLIFE CONSERVATION GROUP

# ವನ್ಯವಿಜ್ಞಾನ ಚಿತ್ರ ಸಂಚಿಕೆ

## *ವನ್ಯವಿಜ್ಞಾನ ಸ್ಪರ್ಧಾ*

***ಬನ್ನೇರುಘಟ್ಟ ರಾಷ್ಟೀಯ ಉದ್ಯಾನವನದ ಸುತ್ತಮುತ್ತಲಿನ ಶಾಲೆಗಳಲ್ಲಿ ಪರಿಸರ ಚಿತ್ರಕಲಾ ಸ್ಪರ್ಧೆ***

'ಬೆಳೆವ ಸಿರಿ ಮೊಳಕೆಯಲ್ಲೇ ' ಎಂದು ನಂಬಿರುವ ನಮ್ಮ **WCG** ತಂಡವು ಮಕ್ಕಳಲ್ಲಿ ಪರಿಸರ ಪ್ರೇಮ ಬೆಳೆಸಲು, ಹಲವಾರು ಕಾರ್ಯಕ್ರಗಳನ್ನು ಮಾಡುತ್ತಾ ಬಂದಿದೆ. ಕಾನನ ಇ-ಮಾಸಿಕವು ತನ್ನ ನಾಲ್ಕನೇ ಸಂವತ್ಸರವನ್ನು ಪೂರೈಸಿ ಐದನೇ ಸಂವತ್ಸರಕ್ಕೆ ಕಾಲಿಟ್ಟ ಈ ಸವಿ ಗಳಿಗೆಯನ್ನು ಆಚರಿಸಲು ನಮ್ಮ ತಂಡವು ಬನ್ನೇರುಘಟ್ಟ ರಾಷ್ಟೀಯ ಉದ್ಯಾನವನದ ಸುತ್ತಮುತ್ತಲಿನ **12** ಪ್ರಾಥಮಿಕ ಶಾಲೆಗಳಲ್ಲಿ ಪರಿಸರ ವಿಷಯಕ್ಕೆ ಸಂಬಂಧಿಸಿದಂತೆ ಚಿತ್ರಕಲಾ ಸ್ಪರ್ಧೆಯನ್ನು ಹಾಗೂ ಒಂದು ಪ್ರೌಢಶಾಲೆಯಲ್ಲಿ ಪ್ರಬಂಧ ಸ್ಪರ್ಧೆಯನ್ನು ದಿನಾಂಕ **17-01-2015** ನೇ ಶನಿವಾರದಂದು ಆಯೋಜಿಸಿತ್ತು. ಇಪ್ಪತ್ತು ಸ್ವಯಂ ಸೇವಕರ ತಂಡದ ಸಹಾಯದಿಂದ ಎಲ್ಲಾ ಸ್ಪರ್ಧೆಗಳನ್ನು ಆಯಾ ಶಾಲೆಗಳಲ್ಲೇ ಏಕಕಾಲದಲ್ಲಿ ನಡೆಸಿ ಅಲ್ಲಿಯೇ ಪ್ರಶಸ್ತಿ ವಿತರಣೆಯನ್ನು ಸಹ ಮಾಡುವಂತೆ ಏರ್ಪಾಡು ಮಾಡಲಾಗಿತ್ತು. ಎಲ್ಲಾ ಸ್ವಯಂ ಸೇವಕರು, ಮಕ್ಕಳು ಆಸಕ್ತಿಯಿಂದ ಭಾಗವಹಿಸಿದ್ದರು. ಮಕ್ಕಳ ಜೊತೆ ಬೆರೆತು, ಮಕ್ಕಳೆ ಆಗಿ ಅವರ ಸುತ್ತ ಮುತ್ತಲಿನ ಕಾಡಿನ ಬಗ್ಗೆ ತಿಳಿಸಲು ಮನಃಪೂರ್ವಕವಾಗಿ ಪ್ರಯತ್ನಮಾಡಿದರು. ಮಕ್ಕಳಲ್ಲಿ ಸ್ವಲ್ಪವಾದರೂ ಪರಿಸರದ ಬಗ್ಗೆ ಕಾಳಜಿ ಮೂಡಿಸಿ ತಮ್ಮ ಸುತ್ತಲಿನ ಪರಿಸರ ವನ್ಯ ಸಂಪತ್ತನ್ನು ಗಮನಿಸುವಂತೆ ಮಾಡುವುದು ನಮ್ಮ ಉದ್ದೇಶ









ಚಿತ್ರಶ್ರೀ. B
5ನೇ ತರಗತಿ






538÷8
468÷9


ಪವನ್ M.R
5ನೇ ತರಗತಿ







# ವನ್ಯ ವಿಜ್ಞಾನ$_{3.0}$ ವನ್ಯ ಜೀವಿ ಛಾಯಾಚಿತ್ರ ಪ್ರದರ್ಶನ




ಸುತ್ತಲೂ ಕಾಡು ಬೆಟ್ಟ. ಬೆಟ್ಟದ ಅಡಿಯಲ್ಲಿನ ಊರು, ಕನಕಪುರದಿಂದ **15** ಕಿ. ಮೀ. ದೂರದ ಒಂದು ಗ್ರಾಮ ಹುಣಸನಹಳ್ಳಿ. ಇಲ್ಲಿನ ಮಕ್ಕಳಲ್ಲಿ ವನ್ಯಜೀವಿ ಕಾಡುಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ನಮ್ಮ **WCG** ತಂಡ ದಿನಾಂಕ **23.01.2015** ರಂದು ವನ್ಯ ವಿಜ್ಞಾನ$_{3.0}$ ವನ್ಯ ಛಾಯಾಚಿತ್ರ ಪ್ರದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೆವು.

ಕಾರ್ಯಕ್ರಮವನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಉಪ ಸಂರಕ್ಷಣಾಧಿಕಾರಿಗಳಾದ ಶ್ರೀ ಚೋಳರಾಜಪ್ಪರವರು ಉದ್ಘಾಟಿಸಿ ಮಾತನಾಡುತ್ತಾ ' ವನ್ಯ ಜೀವಿಗಳ ರಕ್ಷಣೆ ಪ್ರತಿಯೊಬ್ಬ ನಾಗರೀಕರ ಕರ್ತವ್ಯ ' ಎಂದು ಹೇಳಿದರು. ನಂತರ ಹುಣಸನಹಳ್ಳಿಯ ಸುತ್ತಮುತ್ತಲಿನ ಸುಮಾರು **300** ಶಾಲಾಮಕ್ಕಳು ಪ್ರದರ್ಶನ ವೀಕ್ಷಿಸಿದರು. ಮಕ್ಕಳಲ್ಲಿ ಕುತೂಹಲ ಹಾಗೂ ವಿಸ್ಮಯಗಳನ್ನು ತಿಳಿಸುವ ತವಕ ಹೆಚ್ಚಿರುತ್ತದೆ ಎಂಬುದಕ್ಕೆ ಈ ಕಾರ್ಯಕ್ರಮ ಸಾಕ್ಷಿಯಾಗಿತ್ತು. ಪ್ರದರ್ಶನಕ್ಕೆ ಬಂದ ಕೆಲ ಮಕ್ಕಳು " ಸಾರ್ ನೀವು ಮತ್ತೆ ಯಾವಾಗ್ ಬರ್ತೀರ? ", ಎಂಬ ಪ್ರಶ್ನೆಯನ್ನು ಕೇಳಿದ್ದುಂಟು!. ಅಮಿತ ಉತ್ಸಾಹದಿಂದ ಪಾಲ್ಗೊಂಡ ಹಳ್ಳಿ ಮಕ್ಕಳಲ್ಲಿ ವನ್ಯಜೀವಿಗಳ ಬಗ್ಗೆ ಅರಿವು ಮೂಡಿಸಲು ಹೊರಟ ನಮ್ಮ ತಂಡ, ಮಕ್ಕಳಿಂದಲೇ ಹೆಚ್ಚಿನ ವಿಷಯ ತಿಳಿದು, ಕಂಡು ಕಾರ್ಯಕ್ರಮ ಸಫಲವಾಯಿತೆಂದೇ ಹೇಳಬಹುದು.












WILDLIFE
CONSERVATION
GROUP






USA

# ವನ್ಯ ನಗರಿ

ಬಾಗಿಲ ಬಳಿ ಕಣಜಗ ಗೂಡು
ಕಟ್ಟಡ ದ ಚಾವಣಿಯಲಿ ಪಾರಿವಾಳ ಹಿಂಡು
ಮೇಲು ಸೇತುವೆಯ ಅಂಚಿನಲಿ ಹೆಜ್ಜೇನು

ಗೋಪುರಗಲ್ಲಿ ತಂತಿಯಗೂಡು
ಬೇಟೆಗಾಗಿ ಮುಗಿದೆತ್ತರ ದಲಿ ಹದ್ದುದಳು
ಮನೆಯಿಂದ ಮರಕೆ ಜಿಗಿಯುವ ಅಳಿಲು

ಅಳಿದು ಉಳಿದ ಕೆರೆಗಳಲ್ಲಿ ಕಪ್ಪೆ ಮೀನುಗಳು
ಹಂಸ ವಿಹಾರ ಕೊಕ್ಕರೆಗಳ ದಿಬ್ಬಣಗಳು
ಕವಲು ನ್ಯೆದಿಲೆ ಜಿಂಡು ಹಲ್ಲುಗಳು.

ಜೇಡ ಮಿಡತೆ ಚಿಟ್ಟೆ ಗುರುತುಗಳು
ಉದ್ಯಾನವನ ಮರಗಳ ಸಾಲಿನಲಿ ಕೋಗಿಲ ಕೂಗು
ಬಾವಲಿ ಗೂಬೆಗಳಿಂದ ಕಾಳ ರಾತ್ರಿಯ ಬೇಟೆಗಳು

ಗಿಳಿ ಗುಬ್ಬಿಗಳಿಂದ  ಕಾಗೆಗಳ ಸದ್ದು
ಜರಿ ಜಿರಳೆ ಊಜಿ ನೋಣ ಇರುವೆ ಸಾಲು
ಇಲಿ ಮಂಗ ಹೂವಿನಿಂದ ಹೂವಿಗೆ ಹಾರುವ ಪಕ್ಕಿ ಸಾಲು

- ಕೃಷ್ಣನಾಯಕ್




ಕಿತ್ತಳೆ ಬಣ್ಣದ ಸಿನೋರಿಯಸ್ ಮಾರ್ನರ್ ಎಂಬ ಮರಿ ಅಮೇಜಾನ್ ಕಾಡಿನಲ್ಲಿ ಕಂಡು ಬರುತ್ತದೆ. ಈ ಹಕ್ಕಿಯು ಅಮೇಜಾನ್ ಕಾಡಿನ ತರಗೆಲೆಗಳ ಮೇಲೆ ಮೊಟ್ಟೆ ಇಡುತ್ತದೆ. ಇದರ ಗಳು ಕಿತ್ತಳೆ ಬಣ್ಣದ ತುಪ್ಪಳದಿಂದ ಕೂಡಿದೆ. ಈ ಮರಿಗಳ ಬಣ್ಣವಂತೂ ಅದೇ ಕಾಡಿನಲ್ಲಿ ಕಂಡು ಬರುವ ವಿಷಕಾರಿ ಕಂಬಳಿ ಹುಳವನ್ನು ಓಲುತ್ತದೆ. ಬೇರೆ ಹಕ್ಕಿಗಳ ಗೂಡಗಳನ್ನು ಧ್ವಂಸ ಮಾಡಿ ತಿನ್ನುವ ಬೇಟೆಗಾರ ಹಕ್ಕಿಗಳು ನೆಲದ ಮೇಲೆ ರಕ್ಷಣೆ ಇಲ್ಲದೆ ಬಿದ್ದಿರುವ ಈ ಹಕ್ಕಿ ಮರಿಯನ್ನು ವಿಷಕಾರಿ ಎಂದು ಭಾವಿಸಿ ಅದರ ತಂಟೆಗೆ ಹೋಗುವುದಿಲ್ಲ. ಇದರ ತೆರೆದ ಗೂಡಿಗೆ ಏನಾದರೂ ತೊಂದರೆ ಸಂಭವಿಸಿದಾಗ ಕಂಬಳಿಹುಳು ಹುಳುವಿನಂತೆ ತಲೆ ಅಲ್ಲಾಡಿಸಿ ನಟಿಸುತ್ತದೆ. ಸಾಕ್ಸಾತ್ ವಿಷಕಾರಿ ಕಂಬಳಿ ಹುಳುವನ್ನೇ ಹೋಲುವ ಹಾಗೆ ಈ ಹಕ್ಕಿ ಮರಿ ತನ್ನ ದೇಹರಚನೆಯನ್ನು ಜೀವವಿಕಾಸದಲ್ಲಿ ಬದಲಿಸಿಕೊಂಡಿದೆ ಎನ್ನುತ್ತಾರೆ ಜೀವವಿಜ್ಞಾನಿಗಳು.

ಅಮೇಜಾನ್ ಕಾಡಿನಲ್ಲಿ ಕಂಡುಬರುವ ವಿಷಕಾರಿ ಕಂಬಳಿ ಹುಳು



ಎಲೆ ಗೂಡಿನಲ್ಲಿ ಸಿನೋರಿಯಸ್ ಮಾರ್ನರ್ ಹಕ್ಕಿ ಮರಿ

